ಒಂದಲ್ಲ, ಎರಡಲ್ಲ, ಮೂವತ್ತು ವರ್ಷಗಳನ್ನೇ ಕಳೆದಿದ್ದೇನೆ! ಬಹು ದೊಡ್ಡ ಭೂಮಾಲೀಕ ಕುಟುಂಬದಲ್ಲಿ ಕಿರಿಯವನಾಗಿ ಜನಿಸಿದೆ. ಸ್ವಾತಂತ್ರ್ಯ ಹೋರಾಟದ ಕೆಚ್ಚೋ, ಹುಚ್ಚೋ, ಹುಮ್ಮಸ್ಸೋ... ಹಿರಿಯರು ತಮ್ಮ ಸ್ಥಿರಾಸ್ತಿ, ಚರಾಸ್ತಿ ಲಿಲಾವು ಆದರೂ ಹೋರಾಟ ಬಿಡಲಿಲ್ಲ. ಎಲ್ಲವೂ ಸರಿ. ಆದರೆ ನಾವು ಚಿಕ್ಕವರು ತಬ್ಬಲಿಗಳಾಗಿಬಿಟ್ಟೆವು.

"ಸ್ವಾತಂತ್ರ್ಯ ಬಂತು. ಆದರೆ, ನಮ್ಮ ಆಸ್ತಿಗಳು ಹೆರವರ ಪಾಲಾಗಿದ್ದವು. ಕೊಂಡವರೇನೂ ಬೇರೆ ಜನ ಅಲ್ಲ, ನಮ್ಮೂರಿನವರೇ! ನಮ್ಮ ಜಾತಿಯವರೇ! ಅದನ್ನು ನೆನೆದಾಗ 'ಅಬ್ಬಾ, ಮನುಷ್ಯನ ಮನಸ್ಸೇ! ಎಷ್ಟು ಸ್ವಾರ್ಥಿ ಇವನು!'—ಅನಿಸುತ್ತದೆ. ಭೂಮಿ, ಬಂಗಾರ ಎನ್ನುತ್ತ, ಸಾಯುವತನಕ ಇನ್ನೊಬ್ಬರಿಗೆ ಧಗಾ, ಮೋಸ ಮಾಡುತ್ತಾರಲ್ಲ. ತಮ್ಮ ಕಾರ್ಯ ಅನುಚಿತವಾದದ್ದು, ದೇಶದ ಸ್ವಾತಂತ್ರ್ಯದ ಮುಂದೆ ವೈಯಕ್ತಿಕ ಆಸೆ, ದಾಹ ಕ್ಷುದ್ರವಾದುದು ಎಂದೆಲ್ಲ ಇಂಥವರಿಗೆ ತೋರಲೇ ಇಲ್ಲವಲ್ಲ, ಸ್ವಾಮಿ. ನನಗೆ ಇದೊಂದು ಅಚ್ಚರಿ, ನೋವು.

ಹಾಗೆಂದು ನಾನು ಇದಕ್ಕೆಲ್ಲ ಆಸೆಪಟ್ಟು ಇವರ ಮನೆ ಬಾಗಿಲಿಗೆ ತಿರುಗಿದೆ ಎಂದು ತಿಳಿಯಬೇಡಿ. ಏನೂ ಕೇಳಲಿಲ್ಲ. ಇವನ್ನೆಲ್ಲ ಕಡೆಗಣ್ಣಲ್ಲಿ ಕಂಡು ವ್ರತದಂಥ ಜೀವಿತ ನಡೆಸಿದವರನ್ನು ಹತ್ತಿರದಿಂದ ಕಂಡು, ಸೇವೆ ಮಾಡಿದವನು. ತುಂಡು ಭೂಮಿಗಾಗಿ ಅಗ್ಗ ಆಗಲೇ?

ನನ್ನ ಜೀವಿತಕ್ಕಾಗುವಷ್ಟು ಸಣ್ಣ ಪುಟ್ಟ ದುಡಿತ ಮಾಡಿದ್ದೇನೆ. ಖಾದಿಗ್ರಾಮೋದ್ಯೋಗ, ಜೇನು ಸಾಕಾಣಿಕೆ, ಈ ಸಣ್ಣ ತೋಟದ ಆದಾಯ. ನನ್ನೊಬ್ಬನಿಗೆ ಈ ಹಳ್ಳಿಯಲ್ಲಿ ಬೇಕಾದಷ್ಟಾಯಿತು. ಸ್ವಾತಂತ್ರ್ಯ ಯೋಧರ ವೇತನವೂ ಬರುತ್ತಿದೆ. ಆದಷ್ಟೂ ದಿನ ಸ್ವತಂತ್ರವಾಗಿ ಬದುಕುವ ಆಸೆ. ಕುಟುಂಬದ ಜನ ಹತ್ತಿರದ ಊರುಗಳಲ್ಲೇ ಇದ್ದಾರೆ. ಬಾ ಎಂದೂ ಕರೆಯುತ್ತಾರೆ. ಸ್ವಾತಂತ್ರ್ಯ ಹೋರಾಟ ಎಂದೆನಲ್ಲ. ನನ್ನ ಪಾಡಿಗೆ ನಾನು, ನನಗೆ ತಿಳಿದಂತೆ—ಉನ್ನತವಾದ ಜೀವನ ವಿಧಾನ ರೂಢಿಸಿಕೊಂಡು ಬದುಕುವ ಸ್ವಾತಂತ್ರ್ಯಕ್ಕೂ ಹೋರಾಟ ಮಾಡಬೇಕಾಗುತ್ತದೆ!" ನಕ್ಕರು.

"ಅಲ್ಲಪ್ಪ, ನವ್ಯೋತ್ತರ ಅಂತೇನೋ ಹೇಳುತ್ತೀರಲ್ಲ, ಸ್ವಾತಂತ್ರ್ಯ ಹೋರಾಟಕ್ಕೂ, ನಿಮ್ಮ ಆ ಸಾಹಿತ್ಯ ಪ್ರಕಾರಕ್ಕೂ ಅಜ್ಜ, ಮೊಮ್ಮಗನ ಸಂಬಂಧವೂ ಇಲ್ಲವೋ! ಮುತ್ತಜ್ಜನ ಕಾಲಕ್ಕೆ ಪ್ರಾಚೀನ ಗದ್ಯ ಪದ್ಯ, ಅಜ್ಜನ ಕಾಲಕ್ಕೆ ನವೋದಯ, ಅಪ್ಪನ ಕಾಲಕ್ಕೆ ನವ್ಯ, ದಲಿತ, ಬಂಡಾಯ, ನೀವೀಗ ಮಕ್ಕಳು, ನಿಮ್ಮದು ನವ್ಯೋತ್ತರ... ಎಲ್ಲವೂ ಸರಿ, ಆದರೆ ಸಂಬಂಧ ಎಲ್ಲಿಪ್ಪಾ ಹೋಯಿತು? ನಿಮ್ಮ ನವ್ಯೋತ್ತರದಲ್ಲಿ ನಾನಿಲ್ಲವೋ? ನನ್ನ ಸಂಕಟ ಮತ್ತು ದರ್ಶನ ನಿಮ್ಮನ್ನು ತಾಕುವುದಿಲ್ಲವೋ? ಎಲ್ಲ ಹಣೆಪಟ್ಟಿಗಳನ್ನು ಕಳಚಿಕೊಂಡು ನಿಮಗೆ ದಕ್ಕಿದ್ದನ್ನೂ, ದಕ್ಕಲಾರದ್ದರ ಕುರಿತ ಸಂದಿಗ್ಧಗಳನ್ನೂ ಬರೆಯಲಾಗುವುದಿಲ್ಲವೋ? ಬರಹಗಾರರು ನೀವು, ಹಣೆಪಟ್ಟಿಗಳ ಬಂಧನವಿಲ್ಲದ ಸಂಪೂರ್ಣ ಸ್ವಾತಂತ್ರ್ಯದಲ್ಲಿ ಬರೆಯಬೇಕಲ್ಲವೆ, ಮುಕ್ತರಾಗಿ, ನಿರ್ಭಯವಾಗಿ?"

ನಾನು ಸುಸ್ತಾದೆ. ಅವರ ವಿಚಾರಗಳು ಅದೆಲ್ಲೆಲ್ಲಿಂದಲೋ ಅದೆಲ್ಲಿಯವರೆಗೋ ಅಸೀಮವಾಗಿ ಹಾರಾಡುತ್ತಿದ್ದವು. ಇಂದು ಬೆಳಗ್ಗೆ ಭೋಳೆ ಶಂಕರನಂತೆ ಮುಗ್ಧ ಹೆಡ್ಡನಾಗಿ ಕಂಡ ಮನುಷ್ಯ ಇವರು. ತಪ್ಪು ತಪ್ಪಾಗಿ ಪಾಠ ಅರ್ಥ ಮಾಡಿಕೊಂಡ ವಿದ್ಯಾರ್ಥಿಯನ್ನು ಸಿಟ್ಟು, ಸಮಾಧಾನ ಎರಡನ್ನೂ ಪ್ರಯೋಗಿಸಿ ತಿದ್ದುವ ಮಾಸ್ತರಂತೆ ಈಗ ಕಾಣುತ್ತಿದ್ದರು. ನಿಜವಾದ ಸಂವಾದ, ಸಂಕಿರಣ ಈಗ ಇಲ್ಲಿ ನಡೆಯುತ್ತಿದೆ ಅನಿಸಿತು. ಮಾತು ಕೇಳುತ್ತಲೇ ಎಷ್ಟೋ ಹೊತ್ತಿಗೆ ನಾನು ನಿದ್ರೆ ಹೋಗಿರಬೇಕು.

ಬೆಳಗ್ಗೆ ಎದ್ದಾಗ ತುಂಬಾ ಹೊತ್ತಾಗಿಬಿಟ್ಟಿತ್ತು. "ಅವಲಕ್ಕಿ, ಉಪ್ಪಿಟ್ಟು ಸಿದ್ಧ ಮಾಡಿಟ್ಟಿರುವೆ, ಹಾಲಿದೆ, ಚಹಾ ಮಾಡಿಕೊಳ್ಳಿ. ನಿಮಗೆ ಅನುಕೂಲವಿದ್ದರೆ ಇವತ್ತು ಇರಿ. ಇಲ್ಲವಾದರೆ ಕೀಯನ್ನು ಎದುರುಗಡೆ ಇರುವ ಶಾನಭೋಗ ಮಾಸ್ತರಿಗೆ ಕೊಟ್ಟು ನೀವು ಹೊರಡಬಹುದು. ಹತ್ತಿರದೂರಿನವರು ಹಸುವಿಗೆ ನಾಟಿ ಔಷಧಿ ಕೊಡಿಸಲು (ಅದು ಅವರ ಜ್ಞಾನದ ಇನ್ನೊಂದು ಕ್ಷೇತ್ರ!) ಕರೆದೊಯ್ಯುತ್ತಿದ್ದಾರೆ, ನಾನು ಬರಲು ಇಂದು ರಾತ್ರಿಯಾಗಬಹುದು ಅಥವಾ ಒಂದು ವಾರವೇ ತಡವಾಗಬಹುದು. ನವ್ಯೋತ್ತರ ಸಾಹಿತ್ಯಕ್ಕೆ ಶುಭವಾಗಲಿ!" ಎಂದು ಚೀಟಿ ಇರಿಸಿಹೋಗಿದ್ದರು. ಅವರ ಕೊನೆಯ ವಾಕ್ಯದಲ್ಲಿ ವ್ಯಂಗ್ಯಾರ್ಥವೇ ಹೊಳೆಯತೊಡಗಿ ಪೆಚ್ಚಾಗಿ ಕೂತೆ.

●